ಸಾಕ್ಷಿಯನ್ನು ದಿಃ **18.09.2025** ರಂದು ಕರೆಸಲಾಯಿತು. ಪ್ರಮಾಣ ಬೋಧಿಸಲಾಯಿತು.

**<u>ಪಾಟಿ ಸವಾಲು : ಶ್ರೀ ಜಿ ವಾಯ ಕೆ -1 ರಿಂದ 4ನೇ ಎದುರುದಾರ ಪರ ವಕೀಲರಿಂದಃ-</u>**

ನಾನು ಶಿಕ್ಷಕನಾಗಿರುತ್ತೇನೆ. ನಾನು ದಿನಾಂಕ **17.06.1985** ರಂದು ಶಿಕ್ಷಕನಾಗಿ ನೇಮಕ ಹೊಂದಿರುತ್ತೇನೆ. **1988** ಕ್ಕಿಂತ ಮೊದಲು ನಾನು ತಲ್ಲೂರು ಗ್ರಾಮದಲ್ಲಿ ವಾಸವಾಗಿದ್ದೆ. ಈಗಲೂ ಸಹ ನಾನು ತಲ್ಲೂರು ಗ್ರಾಮಕ್ಕೆ ಆಗಾಗ ಭೇಟಿ ನೀಡುತ್ತೇನೆ. ತಲ್ಲೂರು ಗ್ರಾಮದಲ್ಲಿ ನಮ್ಮ ಮನೆತನಕ್ಕೆ ಸಂಬಂದಿಸಿದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಬರುತ್ತದೆ. ನನ್ನ ಒಬ್ಬ ಸಹೋದರ ಬಸವರಾಜ ಎನ್ನುವವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿ ನನ್ನ ಸಹೋದರ ತನ್ನ ಜೀವಿತ ಕಾಲದಲ್ಲಿ **1**ರಿಂದ **3**ನೇ ಎದುರುದಾರ ಜೊತೆಯಲ್ಲಿ ವಾಸವಾಗಿದ್ದ ಎಂದರೆ ಸರಿಯಲ್ಲ.

ನನ್ನ ಸಹೋದರನ ಮರಣದ ನಂತರ **1** ರಿಂದ **4**ನೇ ಎದುರುದಾರರು ತನ್ನ ಸಹೋದರನ ಆಸ್ತಿಗೆ ಸಂಬಂದಿಸಿದಂತೆ ವಾರ್ಸಾ ನಮೂದು ಮಾಡುವಂತೆ ಅರ್ಜಿ ಸಲ್ಲಿಸಿದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ **15.09.2017** ರಂದು **1**ರಿಂದ **4**ನೇ ಅರ್ಜಿದಾರರು ವಾರ್ಸಾ ಪ್ರಮಾಣ ಪತ್ರ ಕೊಡುವಂತೆ ಕೋರಿ ಗ್ರಾಮ ಲೆಕ್ಕಾಧಿಕಾರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯ ಆಧಾರದ ಮೇಲೆ ಗ್ರಾಮ ಲೆಕ್ಕಾಧಿಕಾರಿ ನನಗೆ ಮತ್ತು ನಮ್ಮ ಮನೆತನದ ಇತರ ಸದಸ್ಯರಿಗೆ ವಿಚಾರಿಸಿದರು ಎಂದರೆ ಸರಿಯಲ್ಲ. ನಂತರದಲ್ಲಿ ಗ್ರಾಮ ಲೆಕ್ಕಾಧಿಕಾರಿ ಒಂದು ಹಿಂಬರಹ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹಿಂಬರಹದ ದೃಢಿಕೃತ ಪ್ರತಿಯನ್ನು ತೋರಿಸಿದಾಗ ಸಾಕ್ಷಿಯು ಅದನ್ನು ನೋಡಿ ಓದಿ ಸದರಿ ದಾಖಲೆ ಬಗ್ಗೆ ನನಗೆ ಈಗಲೇ ಗೊತ್ತಾಗಿದೆ ಎಂದು ಹೇಳುತ್ತಾರೆ. ಗ್ರಾಮ ಲೆಕ್ಕಾಧಿಕಾರಿ **2017** ರಲ್ಲಿ ನನಗೆ ವಿಚಾರಿಸಿದಾಗ ನಾನು ಆ ರೀತಿ ವಾರ್ಸಾ ಪ್ರಮಾಣ ಪತ್ರ

ಕೊಡಬಾರದು ಎಂದು ಹೇಳಿದ ಮೇರೆಗೆ ಗ್ರಾಮ ಲೆಕ್ಕಾಧಿಕಾರಿ ಕೇವಲ ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ಕಂಬಾರ ಮನೆತನದ **02** ಮನೆತನಗಳು ಮಾತ್ರ ಇರುತ್ತವೆ. ಗ್ರಾಮ ಲೆಕ್ಕಾಧಿಕಾರಿ ನೀಡಿರುವ ಹಿಂಬರಹದ ಬಗ್ಗೆ ನನಗೆ **2017** ರಲ್ಲಿ ಗೊತ್ತಾಗಿದ್ದರು ಸಹ ಈ ದಾವೆಯಲ್ಲಿ ಜಡ್ಜಮೆಂಟ ಆದ ನಂತರ ನನಗೆ ಮಾಹಿತಿ ಗೊತ್ತಾಗಿರುತ್ತದೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. **1**ರಿಂದ **4**ನೇ ಎದುರುದಾರರು ದಾವೆ ಸಲ್ಲಿಸಿದ ವಿಷಯ ನನಗೆ ಮೊದಲೆ ಗೊತ್ತಿತ್ತು ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಮೊದಲು **1**ರಿಂದ **4**ನೇ ಎದುರುದಾರರು ಗ್ರಾಮ ಲೆಕ್ಕಾಧಿಕಾರಿಗೆ ವಕೀಲರ ಮೂಲಕ ನೋಟಿಸ ನೀಡಿರುವ ವಿಚಾರ ನನಗೆ ಮೊದಲೆ ಗೊತ್ತಿತ್ತು ಎಂದರೆ ಸರಿಯಲ್ಲ. **2**ರಿಂದ **4**ನೇ ಎದುರುದಾರರು ನನ್ನ ಸಹೋದರ ಬಸವರಾಜನ ಮಕ್ಕಳಾಗಿರುವ ವಿಚಾರ ನನಗೆ ಗೊತ್ತಿದ್ದರಿಂದಲೆ ನಾನು ಗ್ರಾಮ ಲೆಕ್ಕಾಧಿಕಾರಿಯವರ ಮುಂದೆ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮೇಲ್ಮನವಿ ಸಲ್ಲಿಸಲು ವಿಳಂಬವಾಗಿರುವುದಕ್ಕೆ ನಿರ್ಧಿಷ್ಟವಾದ ಕಾರಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ತಲ್ಲೂರು ಗ್ರಾಮ ಸಣ್ಣ ಹಳ್ಳಿಯಾಗಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕೋರ್ಟ ಕಚೇರಿ ವಿಷಯ ಬಂದರೆ ಗ್ರಾಮದ ಎಲ್ಲರಿಗೂ ಗೊತ್ತಾಗುತ್ತದೆ ಎಂದರೆ ಸರಿ. **1**ರಿಂದ **4**ನೇ ಎದುರುದಾರರು ದಾವೆ ಸಲ್ಲಿಸಿರುವ ವಿಷಯ ನನಗೆ ಮತ್ತು ನನ್ನ ಉಳಿದ ಸಹೋದರರಿಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. **1**ರಿಂದ **4**ನೇ ಎದುರುದಾರರು ದಾವೆ ಸಲ್ಲಿಸಿರುವ ವಿಷಯ ನಮಗೆ ಮೊದಲೆ ಗೊತ್ತಿದ್ದರು ಸಹ ಆ ದಾವೆಯಲ್ಲಿ ಜಡ್ಜಮೆಂಟ ಆದ ನಂತರ ವಿಷಯ ಗೊತ್ತಾಗಿರತ್ತದೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ. **1**ರಿಂದ **4**ನೇ ಎದುರುದಾರರು ಸಲ್ಲಿಸಿರುವ ದಾವೆ

ಡಿಕ್ರಿ ಆದ ನಂತರ ನಾವು ಒ.ಎಸ. ನಂ.**138/2022** ನ್ನು ದಾಖಲಿಸಿರುತ್ತೇವೆ ಎಂದರೆ ಸಾಕ್ಷಿಯು ಸದರಿ ದಾವೆಯನ್ನು ನನ್ನ ಸಹೋದರ ಸಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ. ಮದ್ಯಂತರ ಅರ್ಜಿ ಸಂಖ್ಯೆ **01** ರಲ್ಲಿ ಹೇಳಿರುವ ಎಲ್ಲಾ ಕಾರಣಗಳು ಸುಳ್ಳು ಎಂದರೆ ಸರಿಯಲ್ಲ.

ನಿಪಿ.**2** ನ್ನು ಅಸ್ತಿತ್ವದಲ್ಲಿ ಇಲ್ಲದ ವ್ಯಕ್ತಿಯ ಹೆಸರನ್ನು ನಮೂದಿಸಿ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.**2** ರಲ್ಲಿ ನಮೂದಿಸಿರುವ ವ್ಯಕ್ತಿಯು ಅಸ್ತಿತ್ವದಲ್ಲಿರುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ.**2** ಮತ್ತು **3** ಈ ಪ್ರಕರಣಕ್ಕೆ ಯಾವುದೇ ರೀತಿ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ.**4** ರಲ್ಲಿ ನನ್ನ ಮತ್ತು ನನ್ನ ಸಹೋದರರ ಹಾಗೂ **1**ರಿಂದ **4**ನೇ ಎದುರುದಾರರ ಹೆಸರುಗಳು ಇರುತ್ತವೆ ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರೆದು **1**ರಿಂದ **4**ನೇ ಎದುರುದಾರರು ಒ.ಎಸ್. ನಂ.**200/2018** ರ ತಿರ್ಪಿನ ಆಧಾರದ ಮೇಲೆ ತಮ್ಮ ಹೆಸರು ಸೇರಿಸಿಕೊಂಡರು ಎಂದು ಹೇಳುತ್ತಾರೆ. ನಿಪಿ.**5** ರಲ್ಲಿ ನಮೂದಿಸಿರುವ ಬಸವರಾಜ ಎನ್ನುವ ಹೆಸರು ನನ್ನ ಸಹೋದರನ ಹೆಸರು ಎಂದರೆ ಸರಿ. ನಿಪಿ.**5** ರಲ್ಲಿ ನೋಂದಣಿ ದಿನಾಂಕ **25.04.1992** ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ.**5** ಎದುರುದಾರ ನಂ.**3** ರಾಜೇಶ್ವರಿ ಇವರಿಗೆ ಸಂಬಂದಿಸಿದ ಜನ್ಮ ಪ್ರಮಾಣ ಪತ್ರವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. **1**ರಿಂದ **4**ನೇ ಎದುರುದಾರರು ನನ್ನ ಸಹೋದರನ ಹೆಂಡತಿ ಮತ್ತು ಮಕ್ಕಳಾಗಿರುತ್ತಾರೆ ಎನ್ನುವ ವಿಚಾರ ನನಗೆ ಮೊದಲೆ ಗೊತ್ತಿತ್ತು ಎಂದರೆ ಸರಿಯಲ್ಲ. **1**ರಿಂದ **4**ನೇ ಎದುರುದಾರರು ದಾವೆ ಸಲ್ಲಿಸಿರುವ ವಿಷಯ ಮೊದಲೆ ಗೊತ್ತಿದ್ದರು ಸಹ ಆರ್ ಟಿ ಎಸ

ನೋಟಿಸ ಬಂದ ನಂತರ ಅವರು ಸಲ್ಲಿಸಿದ ದಾವೆಯ ಬಗ್ಗೆ ಗೊತ್ತಾಯಿತು ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ **1**ರಿಂದ **4**ನೇ ಎದುರುದಾರರು ಈ ಹಿಂದೆ **5**ರಿಂದ **8**ನೇ ಎದುರುದಾರರು ಮಾಡಿರುವ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಸವದತ್ತಿ.**